ದಿ.11.03.2025 ರಂದು ಮಧ್ಯಾಹ್ನ 12.10 ಗಂಟೆಯಿಂದ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ** ಃ

14. ಫಲಾನುಭವಿಗಳು ಗಂಗಾ ಕಲ್ಯಾಣ ಯೋಜನಾ ಅಡಿಯಲ್ಲಿ ಅರ್ಜಿ ಸಲ್ಲಿಸಲು ಏನೇನು ಮಾರ್ಗ ಸೂಚಿಗಳನ್ನು ಪಾಲಿಸಬೇಕಾಗಿರುತ್ತದೆ ಎಂಬ ಬಗ್ಗೆ ನಾನು ನೋಡಿಲ್ಲ. ಸಾಕ್ಷಿಯು ಮುಂದುವರೆದು ಕೇಳಿ ತಿಳಿದುಕೊಂಡಿದ್ದೇನೆ ಎಂದು ಹೇಳುತ್ತಾರೆ.

15. ಮಾರ್ಗಸೂಚಿಯ ಪ್ರಕಾರ ಆಯಾಯಾ ತಾಲ್ಲೂಕಿನಲ್ಲಿ ಕಮಿಟಿಗಳನ್ನು ರಚನೆ ಮಾಡಿರುತ್ತಾರೆ ಮತ್ತು ಸದರಿ ಕಮಿಟಿಗಳಿಗೆ ಎಂ.ಎಲ್.ಎ, ಚೆರ್ಮೆನ್ ಇರುತ್ತಾರೆ ಎಂದರೆ ಸರಿ.

ಮಾರ್ಗಸೂಚಿಯ ಪ್ರಕಾರ ನಮೂನೆ.1 ರಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಕಮಿಟಿಗೆ ಸಲ್ಲಿಸಬೇಕು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಬಿಸಿಎಂ ಇಲಾಖೆಗೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದರು ಎಂದು ಹೇಳುತ್ತಾರೆ.

16. ಕಮಿಟಿಯವರು ಸಭೆಯನ್ನು ಕರೆದು ಅನುಬಂದ-2 ರಲ್ಲಿ ಅರ್ಜಿದಾರರಿಗೆ ನೋಟೀಸು ಕೊಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಬಿಸಿಎಂ ಇಲಾಖೆಯಿಂದ ನೋಟೀಸು ಬಂದಿತ್ತು ಎಂದು ಹೇಳುತ್ತಾರೆ. ಸದರಿ ಕಮಿಟಿಯಲ್ಲಿ ನನ್ನ ಅರ್ಜಿಯನ್ನು ಪರಿಗಣಿಸಲು ಕೈಗೆತ್ತಿಕೊಂಡಾಗ ಬೋರ್ ಕೊರೆಸಲು ಅನುಮತಿ ಕೊಡುತ್ತಾರೆ ಎಂದರೆ ಸರಿ.

17. ಡ್ರಿಲ್ಲಿಂಗ್ ಏಜೆನ್ಸಿಗೆ ವರ್ಕ್ ಆರ್ಡರ್ ಕೊಟ್ಟ ನಂತರ ಡ್ರಿಲ್ಲಿಂಗ್ ಏಜೆನ್ಸಿಯವರು ಬಂದು ಕೆಲಸ ಪ್ರಾರಂಭಿಸಲು ಆದೇಶ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುರೆದು ಹೇಳುತ್ತಾರೆ ಕಮಿಟಿ ಬಗ್ಗೆ ನನಗೆ ಗೊತ್ತಿಲ್ಲವೆಂದು ಬಿಸಿಎಂ ಇಲಾಖೆಯಿಂದ ಆದೇಶ ಬರುತ್ತದೆ ಎಂದು ಹೇಳುತ್ತಾರೆ.

18. ತನಿಖಾಧಿಕಾರಿಯು ನನ್ನ ಬಳಿ ಯಾವುದೇ ದಾಖಲೆಯನ್ನು ತೆಗೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಬಿಸಿಎಂ ಕಛೇರಿಯಿಂದ ಪಡೆದಿದ್ದಾರೆಂದು ಹೇಳುತ್ತಾರೆ.

ಈ ಹಂತದಲ್ಲಿ ಆರೋಪಿಯ ಪರ ವಕೀಲರಿಗೆ ಹುಷಾರಿಲ್ಲದಿದುದ್ದರಿಂದ (ಶೀತ, ಜ್ವರ) ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ, ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.